'ಏನು ಹೇಳಲಿ ಬಾಳರಾಯರೇ, ಇಂದು ಇಲ್ಲಿಗೆ ಬಂದು ಮುಟ್ಟಿದ್ದೇನೆ; ಅದೇ ದೊಡ್ಡದು ಹೇಳಿ. ನಮ್ಮ ಗೋಕರ್ಣದಲ್ಲಿ ಬೆಳಗಿನಿಂದ ವಿಪರೀತ ಮಳೆ, ಕೆಳಗಿನ ಕೇರಿ ಎಲ್ಲಾ ಬರೀ ನೀರು, ಮೇಲೇ ಸ್ವಲ್ಪ ನೋಡುವ ಹಾಗೆ ಇದೆ– ಕೆಳಗೆ ಕೇಳಬೇಡಿ. ಆಚೆ ಕಡೆಗೂ ಜೋರು ಮಳೆಯಂತೆ. ರಾತ್ರಿ ಎಲ್ಲಾ ಕಣ್ಣುಮುಚ್ಚಿ ಹೊಯ್ದದಂತೆ. ಮಿರ್ಜಾನ ತಾರಿಗೂ ಹೊನ್ನಾವರ ತಾರಿಗೂ ನೆಗಸು ಬಂದು ಟಪಾಲು ಗಾಡಿಯೇ ಬಂದಿಲ್ಲ. ಇನ್ನು ಬಂದರೆ ನಾಳೆ ಬರಬೇಕು. ಇಷ್ಟು ಹೊತ್ತು ದಾರಿ ಕಾದು ಮಳೆ ಮಾತ್ರ ಹೊಳವು ಆದಮೇಲೆ ನಾನು ಇಲ್ಲಿಗೆ ಹೊರಟುಬಂದೆ. ಹೋಗಲಿ ಅದು, ನಾನು ರಜೆಯ ಮೇಲೆ ಹೋಗಬೇಕು. ಈ ತಿರುಗಾಟದಲ್ಲಿ ಸಾಕಾಗಿಬಿಡುತ್ತದೆ' ಎಂದು ಒಂದೇ ಸವನೇ ಬಿಡುವಿಲ್ಲದೇ ಹೇಳಿ ಮಂದಿಯ ಕಡೆಗೆಲ್ಲಾ ಒಮ್ಮೆ ಕಣ್ಣುಹಾಯಿಸಿ ಅಲ್ಲಿಯೇ ಗೋಡೆಗೆ ಒರಗಿ ಕುಳಿತುಬಿಟ್ಟ.

'ಉಸ್, ಸಾಕಾಯ್ತಪ್ಪಾ' ಎಂದು ಟೊಪ್ಪಿಗೆಯನ್ನು ಇಳಿಸಿ ಮಡಚಿದ ಮೊಣಕಾಲಿನ ಮೇಲೆ ಇಟ್ಟುಕೊಂಡ. ತುಸು ಹೊತ್ತು ಧ್ಯಾನಸ್ಥನಾದವನಂತೆ ಕಣ್ಣು ಮುಚ್ಚಿ ಇನ್ನೊಮ್ಮೆ 'ಉಸ್' ಎಂದು ಏನೋ ಹೊಳೆದ ಹಾಗೆ ಕಣ್ಣು ತೆರೆದ.

ಅಲ್ಲಿಯವರೆಗೆ ಕೂಡಿದ ಮಂದಿ ಕೊಡೆ ಮಡಚಿ ಕಂಕುಳಲ್ಲಿಟ್ಟು ಪೋಸ್ಟಾಫೀಸಿನ ಸುತ್ತ ಕಬ್ಬಿಣದ ಸರಳಿನಲ್ಲಿ ತಲೆ ಹಾಕಿಕೊಂಡು ನಿಂತಿದ್ದರು. ಪೋಸ್ಟಮಾಸ್ತರರು ಟಪಾಲಿನ ಚೀಲ ಬಿಚ್ಚಿ ಸರಕಾರಿ ಕಾಗದಪತ್ರಗಳನ್ನು ತೆಗೆದು ಕನ್ನಡಕದ ಸಂದಿನೊಳಗಿಂದ ಕಣ್ಣು ಹಾಯಿಸಿ, 'ಓಹೋ ಇದೆಲ್ಲಾ ಕಾಗದ ನಮಗೆ ಅಂತ ಕಾಣುತ್ತದೆ' ಅಂದರು. ಅವರು ಹೇಳಿ ಮುಗಿಸುವತನಕ ರಾಯಪ್ಪ ಬೆಚ್ಚಿಬಿದ್ದವನಂತೆ ಜಾಗ ಬದಲಿಸಿ–

'ಓಯ್, ಬಾಳರಾಯರೂ, ನಮ್ಮ ಮಾಳಪ್ಪ ಶ್ಯಾನಭೋಗರಿದ್ದರಲ್ಲ– ಅವರು ಸತ್ತರಂತೆ ಗೊತ್ತುಂಟೋ ನಿಮಗೆ?' ಎಂದ.

'ಆಂ? ಮಾಳಪ್ಪ ಶ್ಯಾನುಭೋಗರೋ, ಹಂ. ಹಂ. ಹೌದು ಇಲ್ಲಿ ಇದ್ರಲ್ಲಾ ಶ್ಯಾನುಭೋಗರು ಅವರೋ? ಕೆರೆಮನೆ ದೇವರಾಯರ ಮನೆಯಲ್ಲಿ ಬಾಡಿಗೆಗೆ ಇದ್ದವರಲ್ಲವೋ' ಎಂದು ಅದೇ ಹುಬ್ಬು ಕೊರೆದು ಬರುವ ನೋಟದಿಂದ ರಾಯಪ್ಪನನ್ನು ನೋಡಿದರು.

'ಹೌದು ಹೌದು ಹೌದು.'

ಕೂಡಿದ ಜನರೆಲ್ಲ ಮೋರೆ ಮೋರೆ ನೋಡಿಕೊಂಡರು. ಅವರಿಗೆಲ್ಲ ಆಶ್ಚರ್ಯ, ಕಳವಳ. ಗಾಬರಿ ಎಲ್ಲ ಒಂದೇ ಬಾರಿಗೆ ಆಯಿತು. ನೆರೆದ ಮಂದಿಯಲ್ಲಿ ಘುಸು ಘುಸು ಮಾತು ಹರಡಿತು. ಹಸಿದ ಹೊಟ್ಟೆ ಬಾಯಿಯನ್ನು ತಡೆಯಲಾರದಾಯಿತು. ಎಲ್ಲಕ್ಕೂ ಹಿಂದೆ ಮುಂಗಾಲನ್ನಷ್ಟೇ ಊರಿನಿಂತ ಐದು ಫೂಟಿನ ಪರಮೇಶ್ವರ ಭಟ್ಟರು ಎಲ್ಲರನ್ನೂ ಒತ್ತಿ ನೂಕಿ ಬಾಗಿಲೊಳಗಿಂದ ನುಸುಳಿ ಒಳಕ್ಕೆ ಬಂದು ಜನಿವಾರಕ್ಕೆ ಕೈ ಇಟ್ಟು ತಂಬೂರಿಯ ತಂತಿಗಳ ಮೇಲೆ ಬೆರಳಾಡಿಸಿದಂತೆ, 'ಎಂಥಾ ಆಯ್ತು ಅವರಿಗೆ? ಚೊಕ್ಕ ಬಂಗಾರದ ಹಾಗೆ ಇದ್ದ ನೋಡು ಅವ್ನು. ಅವನಂತಹ ಶ್ಯಾನುಭೋಗರೇ ಇಲ್ಲಿಗೆ ಬಂದಿಲ್ಲ. ಬಹಳ ಥಂಡು ಸ್ವಭಾವ. ತಣ್ಣೀರೂ ತಣಿಸಿ ಕುಡಿಯುವ ಹಾಗೆ! ಪಾಪ!' ಎಂದು ನುಡಿದೇಬಿಟ್ಟರು ತಮ್ಮ ವೇದವಾಣಿ.

ಮಂದಿಯ ಗುಜುಗುಜು ಪ್ರಾರಂಭವಾಯಿತು. ತಮಗೆ ಕೂಡ ಹಾಗೆ ತರ್ಕಿಸಿ ಆ ಶ್ಯಾನುಭೋಗನ ದುರುಂತದ ಬಗ್ಗೆ ಮಾತನಾಡುತ್ತ ಅಲ್ಲಿಂದ ಹೊರಡುವಾಗ ಮಧ್ಯಾಹ್ನದ ಎರಡು ಹೊಡೆಯಿತು. ಪೇಟೆಯಲ್ಲಿ ದಂಧೆ ಬಿಡದೇ ಕಾದು ಕುಳಿತ ಸೆಟ್ಟರು, ಬೀಡಿ ಅಂಗಡಿಯ ಬಾಬೂ, ಅಂಬಿಕಾ ರೆಸ್ಟೋರಂಟಿನ ಅಪ್ಪಣ್ಣ ಕಾಮತರು ಊಟಕ್ಕೆ ಹೋಗದೇ ಟಪಾಲು ಸುದ್ದಿಯ ದಾರಿ